KAUK010007802019

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 10/2019**

**ದೋ.ಸಾ. : 4 ಫಿರ್ಯಾ.ಸಾ. : 1**

| | | |
|---|---|---|
| ಸಾಕ್ಷಿಯ ಹೆಸರು | : | ಅರುಣ ತುಕಾರಾಮ ನಾಯ್ಕ |
| ತಂದೆಯ ಹೆಸರು | : | ತುಕಾರಾಮ ನಾಯ್ಕ |
| ವಯಸ್ಸು | : | 59 ವರ್ಷ |
| ಕೆಲಸ | : | ಕೂಲಿ |
| ಹಾಲಿ ವಾಸ | : | ಮಧ್ಯವಾಡ, ಕಾರವಾರ |
| ಖಾಯಂ ವಾಸ | : | ಹೊನ್ನೆಗೇರಿ, ಅಂಕೋಲಾ |

**ದಿನಾಂಕಃ 12-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ದಿನಾಂಕಃ 23-10-2018 ರಂದು ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ಮೌಖಿಕವಾಗಿ ಕರೆದಿದ್ದರು. ನಾನು ಆ ದಿನ ಠಾಣೆಗೆ ಹೋದಾಗ, ಅಲ್ಲಿ 2 ಮತ್ತು 3 ನೇ ಆರೋಪಿತರು ಹಾಜರಿದ್ದರು ಹಾಗೂ ಅವರು ನಾವು ಪ್ರೇಮಕುಮಾರನನ್ನು ಕೊಲೆ ಮಾಡಿರುತ್ತೇವೆ ಹಾಗೂ ಪ್ರೇಮಕುಮಾರ ಇಟ್ಟಿದ್ದ ಗಾಡಿಯನ್ನು ತೋರಿಸುತ್ತೇವೆ ಹಾಗೂ ಪ್ರೇಮಕುಮಾರನನ್ನು ಕರೆದುಕೊಂಡು ಹೋದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದರು. ಅವರ ಹೇಳಿಕೆಯ ಮೇರೆಗೆ ಪೋಲೀಸರು ನನ್ನನ್ನು ಹಾಗೂ ಚಾಸಾ 5 ರವರನ್ನು ಮತ್ತು 2 ಮತ್ತು 3 ನೇ ಆರೋಪಿತರನ್ನು ತಮ್ಮ ಜೀಪ್ ನಲ್ಲಿ ಕರೆದುಕೊಂಡು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾವು ಆಸ್ಪತ್ರೆಗೆ ಹೋದಾಗ, ಅಲ್ಲಿ ಮೃತ ಪ್ರೇಮಕುಮಾರನ ದ್ವಿ ಚಕ್ರ ವಾಹನ ಸಂಖ್ಯೆಃ KA-19/EV-8128 ಆಸ್ಪತ್ರೆಯ ಆವರಣದಲ್ಲಿ ಇತ್ತು. ಅದನ್ನು 2 ನೇ ಆರೋಪಿತ ತೋರಿಸಿರುತ್ತಾನೆ ಹಾಗೂ ಅವರು ಮೃತ ಪ್ರೇಮಕುಮಾರನನ್ನು 2 ನೇ ಆರೋಪಿತನಿಗೆ ಸೇರಿದ ಜೆನ್ ಕಾರಿನಲ್ಲಿ ಇಲ್ಲಿಂದಲೇ ಕರೆದುಕೊಂಡು ಹೋಗಿರುತ್ತೇವೆ ಎಂದು

ಹೇಳಿರುತ್ತಾರೆ. ನಂತರ, ಪೋಲೀಸರು ಮೃತ ಪ್ರೇಮಕುಮಾರನ ದ್ವಿ ಚಕ್ರ ವಾಹನವನ್ನು ಜಪ್ತು ಪಡಿಸಿಕೊಂಡು, ಪಂಚನಾಮೆ ಮಾಡಿ, ಛಾಯಾಚಿತ್ರವನ್ನು ತೆಗೆದು, ಜಪ್ತು ಪಂಚನಾಮೆಗೆ ನನ್ನ ಹಾಗೂ ಚಾಸಾ 5 ರವರ ರುಜುವನ್ನು ಪಡೆದುಕೊಂಡರು. ಸದ್ರಿ ಪಂಚನಾಮೆಯನ್ನು ಸಂಜೆ 7.00 ರಿಂದ 8.00 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ರುಜುವನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು ಹಾಗೂ ಅವುಗಳಲ್ಲಿ ನಾನು ಇರುವುದಾಗಿ ಹೇಳಿರುತ್ತಾರೆ ಹಾಗೂ ನಿಪಿ 3 ರಲ್ಲಿರುವ ಮೃತ ಪ್ರೇಮಕಾಮಾರನಿಗೆ ಸೇರಿದ ದ್ವಿ ಚಕ್ರ ವಾಹನವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ನಂತರ, ದಿನಾಂಕಃ 26-10-2018 ರಂದು ಪೋಲೀಸರು ಪಂಚನಾಮೆಗೆ ಬರುವಂತೆ, ಮೌಖಿಕವಾಗಿ ಕರೆದಿರುತ್ತಾರೆ. ಅದರಂತೆ, ನಾನು ಆ ದಿನ ಠಾಣೆಗೆ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ, ಮತ್ತೊಬ್ಬ ಪಂಚ, 2 ಮತ್ತು 3 ನೇ ಆರೋಪಿತರು ಅಲ್ಲಿ ಹಾಜರಿದ್ದರು. ಅಲ್ಲಿ 2 ಮತ್ತು 3 ನೇ ಆರೋಪಿತರು ಮೃತ ಪ್ರೇಮಕುಮಾರನ ಬಟ್ಟೆ, ಪರ್ಸ, ಶೂ ಹಾಗೂ ಆತನ ಕೊಲೆಗೆ ಉಪಯೋಗಿಸಿದ 2 ಕತ್ತಿಗಳನ್ನು ಮತ್ತು 2 ನೇ ಆರೋಪಿಗೆ ಸೇರಿದ ಬಟ್ಟೆಗಳನ್ನು ಕದ್ರಾ ಡ್ಯಾಮ್ ನಲ್ಲಿ ಎಸೆದಿರುತ್ತೇವೆ ಹಾಗೂ ಬಂದರೆ ತೋರಿಸುತ್ತೇವೆ ಎಂದು ಹೇಳಿದರು. ಅದರಂತೆ, ಪೋಲೀಸರು ನನ್ನನ್ನು, ಮತ್ತೊಬ್ಬ ಪಂಚ, 2 ಮತ್ತು 3 ನೇ ಆರೋಪಿತರನ್ನು ತಮ್ಮ ಜೀಪ್ ನಲ್ಲಿ ಕದ್ರಾ ಡ್ಯಾಮ್ ಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದಾಗ, 2 ಮತ್ತು 3 ನೇ ಆರೋಪಿತರು ಮೃತ ಪ್ರೇಮಕುಮಾರನ ಬಟ್ಟೆ, ಪರ್ಸ, ಶೂ ಹಾಗೂ ಆತನ ಕೊಲೆಗೆ ಉಪಯೋಗಿಸಿದ 2 ಕತ್ತಿಗಳನ್ನು, 2 ನೇ ಆರೋಪಿಗೆ ಸೇರಿದ ಬಟ್ಟೆಗಳನ್ನು ಇದೇ ಜಾಗದಲ್ಲಿ ಎಸೆದಿರುತ್ತೇವೆ ಎಂದು ತೋರಿಸಿದರು. ಅದರಂತೆ ಪೋಲೀಸರು ಈಜುಗಾರರನ್ನು ಕರೆಸಿ, ನೀರಿನಲ್ಲಿ ಹುಡುಕಿಸಿದಾಗ 1 ಕತ್ತಿ ಮಾತ್ರ ಸಿಕ್ಕಿರುತ್ತದೆ, ಉಳಿದ ವಸ್ತುಗಳು ಸಿಕ್ಕಿರುವುದಿಲ್ಲ. ಸದ್ರಿ ಕತ್ತಿಯನ್ನು ಬಟ್ಟೆಯಿಂದ ಸುತ್ತಿ, ನನ್ನ ರುಜು ಪಡೆದುಕೊಂಡರು ಹಾಗೂ ನಮ್ಮ ಸಮಕ್ಷಮ ಪಂಚನಾಮೆ ಮಾಡಿ, ಛಾಯಾಚಿತ್ರ ತೆಗೆದರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು**

**ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಯು ಕತ್ತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ಸ್ದರಿ ಕತ್ತಿಯ ತುದಿಯು ತುಂಡಾಗಿದ್ದು, ಸಾಕ್ಷಿಯು ಜಪ್ತುಪಡಿಸಿಕೊಳ್ಳುವ ಕಾಲದಲ್ಲಿಯೇ ಸ್ದರಿ ಕತ್ತಿಯ ತುದಿಯು ತುಂಡಾಗಿರುತ್ತದೆ ಎಂದು ನುಡಿಯುತ್ತಾರೆ. ಸ್ದರಿ ಕತ್ತಿಗೆ ಅಂಟಿಸಿದ ಚೀಟಿಯ ಮೇಲಿರುವ ತನ್ನ ರುಜುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮು. ಮಾ. 1(ಎ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. ಅವುಗಳಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 4 ನ್ನು ಗಣೇಶಗುಡಿಯ ಡ್ಯಾಮ್ ನ ಹತ್ತಿರದ ಸೇತುವೆಯ ಬಳಿ ಕತ್ತಿ ಬಿಸಾಕಿದ ಸ್ಥಳದಲ್ಲಿ ತೆಗೆದ ಛಾಯಾಚಿತ್ರವಾಗಿರುತ್ತದೆ. ನಿಪಿ 5 ನ್ನು ಕತ್ತಿಯನ್ನು ನೀರಿನಿಂದ ಹೊರತೆಗೆದ ಸಮಯದಲ್ಲಿ ತೆಗೆದ ಛಾಯಾಚಿತ್ರವಾಗಿರುತ್ತದೆ.

ನಂತರ 3 ನೇ ಆರೋಪಿ ನಮ್ಮನ್ನು ದಾಂಡೇಲಿಯಲ್ಲಿರುವ ಅವನ ಮನೆಗೆ ಕರೆದುಕೊಂಡು ಹೋಗಿ, ಅಲ್ಲಿ ಮೃತ ಪ್ರೇಮಕುಮಾರನ ಅಂದಾಜು 12 ಗ್ರಾಂ. ನ ಒಂದು ಬಂಗಾರದ ಚೈನ್, 3 ನೇ ಆರೋಪಿ ತಾನು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ಅಂದರೆ, ನೀಲಿ ಬಣ್ಣದ ಶರ್ಟ ಹಾಗೂ ಸಿಮೆಂಟ್ ಬಣ್ಣದ ಪ್ಯಾಂಟ್ ಹಾಗೂ ಆತನ ಸೋನಿ ಕಂಪನಿಯ ಮೊಬೈಲ್ ನ್ನು ಪೋಲೀಸರಿಗೆ ನೀಡಿರುತ್ತಾನೆ. 3 ನೇ ಆರೋಪಿ ನೀಡಿದ ಬಟ್ಟೆಗಳಿಗೆ ರಕ್ತದ ಕಲೆ ಆಗಿರುತ್ತದೆ. ಸ್ದರಿ ಬಂಗಾರದ ಚೈನ್, ಬಟ್ಟೆಗಳನ್ನು ಹಾಗೂ ಮೊಬೈಲ್ ನ್ನು ಪೋಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ, ಜಪ್ತು ಪಡಿಸಿಕೊಂಡರು ಹಾಗೂ ಸ್ದರಿ ಪಂಚನಾಮೆಗೆ ನಮ್ಮ ರುಜು ಪಡೆದುಕೊಂಡರು ಹಾಗೂ ಛಾಯಾಚಿತ್ರವನ್ನು ತೆಗೆದರು. ಪಂಚನಾಮೆಯ ಕಾಲಕ್ಕೆ ತೆಗೆದ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸ್ದರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಯು 3 ನೇ ಆರೋಪಿಗೆ ಸೇರಿದ ನೀಲಿ ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 2 ಎಂದು ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ರುಜುವನ್ನು ಮು. ಮಾ. 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು 3 ನೇ ಆರೋಪಿಗೆ ಸೇರಿದ ಸಿಮೆಂಟ್ ಬಣ್ಣದ ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 3 ಎಂದು ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ರುಜುವನ್ನು ಮು. ಮಾ. 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮೃತ ಪ್ರೇಮಕುಮಾರನ ಒಂದು ಬಂಗಾರದ ಚೈನ್ ನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 4 ಎಂದು ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ರುಜುವನ್ನು ಮು. ಮಾ. 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ನೇ ಆರೋಪಿಗೆ ಸೇರಿದ ಸೋನಿ ಕಂಪನಿಯ ಮೊಬೈಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 5 ಎಂದು ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ರುಜುವನ್ನು ಮು. ಮಾ. 5(ಎ) ಎಂದು ಗುರುತಿಸಲಾಯಿತು.

ನಂತರ, 2 ನೇ ಆರೋಪಿ ನಮ್ಮನ್ನು ಆತನ ಮನೆಗೆ ಕರೆದುಕೊಂಡು ಹೋದನು. ಅಲ್ಲಿ 2 ನೇ ಆರೋಪಿ ತನ್ನ ಒಂದು ನೊಕಿಯಾ ಕಂಪನಿಯ ಮೊಬೈಲ್ ಹಾಗೂ ಒಂದು ಎಂ.ಆಯ್ ಕಂಪನಿಯ ಮೊಬೈಲ್ ನ್ನು ಪೋಲೀಸರಿಗೆ ನೀಡಿದನು. ಅಲ್ಲಿ ಪೋಲೀಸರು ನಮ್ಮ ಸಮಕ್ಷಮ ಎರಡು ಮೊಬೈಲ್ ಗಳನ್ನು ಜಪ್ತು ಪಡಿಸಿಕೊಡು ಪಂಚನಾಮೆ ಮಾಡಿದರು ಹಾಗೂ ಸದ್ರಿ ಪಂಚನಾಮೆಗೆ ನಮ್ಮ ರುಜು ಪಡೆದುಕೊಂಡರು ಮತ್ತು ಛಾಯಾಚಿತ್ರವನ್ನು ತೆಗೆದರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 7 ಎಂದು, ಸಾಕ್ಷಿಯ ರುಜುವನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ 3 ನೇ ಆರೋಪಿಯಿಂದ ಜಪ್ತುಪಡಿಸಿಕೊಂಡ 2 ಮೊಬೈಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನೊಕಿಯಾ ಮೊಬೈಲ್ ನ್ನು ಮು. ಮಾ. 6 ಎಂದು, ಎಂ ಆಯ್. ಮೊಬೈಲ್ ನ್ನು ಮು. ಮಾ. 7 ಎಂದು, ಅವುಗಳ ಮೇಲೆ ಅಂಟಿಸಿರುವ ಚೀಟಿಯ ಮೇಲಿನ ಸಾಕ್ಷಿಯ ರುಜುವನ್ನು ಮು. ಮಾ. 6(ಎ) ಮತ್ತು ಮು. ಮಾ. 7(ಎ) ಎಂದು ಗುರುತಿಸಲಾಯಿತು. ನಿಪಿ 7 ಪಂಚನಾಮೆಯನ್ನು ಬೆಳಿಗ್ಗೆ 5.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ ಬರೆದಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದಿನಾಂಕಃ 16-11-2018 ರಂದು ಪೋಲೀಸರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು, ಅಲ್ಲಿ ಮೃತ ಪೇಮಕುಮಾರನ ತಾಯಿಯವರ ರಕ್ತ ಮಾದರಿಯನ್ನು ವೈದ್ಯರು ಸಂಗ್ರಹಿದರು. ಆ ಸಮಯದಲ್ಲಿ ನನ್ನಿಂದ Identification Form ಮೇಲೆ ನನ್ನ ರುಜುವನ್ನು ಪಡೆದುಕೊಂಡರು. ಷದ್ರಿ Identification Form ನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 9 ಎಂದು, ಸಾಕ್ಷಿಯ ರುಜುವನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು, ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

ಈ ಮೇಲೆ ಹೇಳಿದಂತೆ, ದಿನಾಂಕಃ 26-10-2018 ರಂದು ಜೊಯಿಡಾ ತಾಲೂಕಿನ ಗಣೇಶಗುಡಿಯ ಕಾಳಿ ನದಿಯ ಸೇತುವೆಯ ಬಳಿ ಹೋದಾಗ, 2 ನೇ ಆರೋಪಿಯು ನಾವು ಇದೇ ನೀರಿನಲ್ಲಿ ಮೃತ ಪ್ರೇಮಕುಮಾರನ ಬಟ್ಟೆ , ಪರ್ಸ, ಶೂ ಹಾಗೂ ಆತನ ಕೊಲೆಗೆ ಉಪಯೋಗಿಸಿದ 2 ಕತ್ತಿಗಳನ್ನು ಮತ್ತು 2 ನೇ ಆರೋಪಿಗೆ ಸೇರಿದ ಬಟ್ಟೆಗಳನ್ನು ಹಾಗೂ 2 ಕಪ್ಪು ಬಣ್ಣದ ಬಟ್ಟೆಯ ತುಂಡುಗಳನ್ನು ಎಸೆದಿರುತ್ತೇವೆ ಎಂದು ತೋರಿಸಿರುತ್ತಾನೆ ಎಂದರೆ ಸರಿ. ನಿಪಿ 2 2 ನೇ ಆರೋಪಿಯು ನಾವು ಪ್ರೇಮಕುಮಾರನನ್ನು ಇದೇ ಸ್ಥಳದಿಂದ ಕಾರಿನಲ್ಲಿ ಕರೆದುಕೊಂಡು ಹೋಗಿರುತ್ತೇವೆ ಎಂದು ತೋರಿಸಿದ ಸ್ಥಳದ ಛಾಯಾಚಿತ್ರವಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ